JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಅಕ್ಕನ ವಚನಗಳ ಅಭಿವ್ಯಕ್ತಿಯ ಸ್ವರೂಪ

**ಆಡಿ. [illegible] ಃತ**

**ಸಾರಲೇಖ:**

ಅಕ್ಕನ ವಚನಗಳ ಒಟ್ಟು ಅಭಿವ್ಯಕ್ತಿಯಲ್ಲಿ ವಸ್ತು ವಿಷಯಗಳನ್ನು 'ಆತ್ಮನಿರೀಕ್ಷಣೆ, ಶರಣಸತಿ ಲಿಂಗಪತಿ, ತೀವ್ರವಿರಕ್ತಿ, ಶಿವನ ಸಾಕಾರ ರೂಪವರ್ಣನೆ, ಷಟ್ಸ್ಥಲ ಸಿದ್ಧಾಂತ, ವಿರಕ್ತನ ಲಕ್ಷಣ, ವೈಯಕ್ತಿಕ ಸಂಗತಿಗಳು, ಅಲ್ಪಮಟ್ಟಿಗೆ ಸಮಾಜ ವಿಮರ್ಶೆ" ಎಂದು ವಿಂಗಡಿಸಲಾಗಿದೆ. ಅಕ್ಕಮಹಾದೇವಿ ಸ್ವಭಾವತಃ ದೈವಭಕ್ತೆಯಾಗಿದ್ದಳು. ಇಷ್ಟದೈವವನ್ನು ಭಕ್ತಿಯಿಂದ ಒಲಿಸಿಕೊಳ್ಳುವ ಹಂಬಲ ಬಾಲ್ಯದಿಂದಲೇ ಬಂದಂತಹದ್ದು. ಲಿಂಗ ಭಕ್ತಿ, ಆತ್ಮ ಚಿಂತನೆಯಲ್ಲಿ ಮನಮಗ್ನಳಾದ ಅಕ್ಕನ ಆಧ್ಯಾತ್ಮದ ಆಸಕ್ತಿಗಳು ಅಂತಂಗದ ಅಭಿವ್ಯಕ್ತಿ. ನಿತ್ಯ ಕನಸಿನಲ್ಲಿ ಕಾಣುವ ಚೆನ್ನಮಲ್ಲಿಕಾರ್ಜುನನನ್ನು ಒಲಿಸುವ ಗಾಢವಾದ ಅಪೇಕ್ಷೆಯಾಗಿ ತನ್ನೊಳಗೆ ಅವನನ್ನೇ ಕನವರಿಸುವಳು. 'ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಳು ತೋರದ ಮುನ್ನ,' ಸ್ತ್ರೀತ್ವದ ಅರಿವು ಮೀರಿದ ಆಧ್ಯಾತ್ಮ ಅನಿಸಿಕೆಗಳು. ಯೌವನವು ಮೂಡುವ ಮೊದಲೇ ಚೆನ್ನಮಲ್ಲಿಕಾರ್ಜುನನಲ್ಲಿ ಸೇರಿಕೊಂಡ ಭಾವವನ್ನು ಆಕೆ ಈ ವಚನ ಸೂಚಿಸುತ್ತದೆ. 'ಹೆಂಗೂಸೆಂಬ' ಲೌಕಿಕ ಸಂಬಂಧವನ್ನು ಕಳಚಿಕೊಂಡ ಆಕೆಯ ಭಕ್ತಿಯ ಮಾರ್ಗ ಸ್ಪಷ್ಟವಾಗಿ ತೋರುತ್ತದೆ.

**ಪ್ರಮುಖ ಪದಗಳು:**

ಅಕ್ಕಮಹಾದೇವಿ, ವಚನಗಳು, ಅಭಿವ್ಯಕ್ತಿ, ಅಂತರಂಗ, ಬಹಿರಂಗ, ಅನುಭಾವ, ಆಧ್ಯಾತ್ಮ.

**ಪೀಠಿಕೆ:**

ಭಕ್ತಿ-ವಿರಕ್ತಿ, ಶಕ್ತಿ, ನಿಶ್ಚಲ ನಿಷ್ಠೆ, ಕಠೋರ ಹಾದಿಯಲ್ಲಿ ಸಾಗುವ ಅಕ್ಕ ತನ್ನ ಸುತ್ತಲ ಜಗತ್ತಿನ ಸಂಬಂಧಗಳ ಅಂತರ ದೂರಮಾಡಿಕೊಳ್ಳುವತ್ತ ಸಾಗುತ್ತಾಳೆ. ಈ ಭಕ್ತಿ-ವಿರಕ್ತಿಯ ಆಯ್ಕೆಯ ಹಾದಿಯು ಎಲ್ಲ ನಶ್ವರತೆಯನ್ನೂ ಮೀರಿದ ಎಲ್ಲ ಸಾವನ್ನೂ ಗೆದ್ದ, ಎಲ್ಲ ಸತ್ಯವನ್ನೂ ಶಾಶ್ವತವಾಗಿ ಪಡೆಯುವ ಮರಣರಹಿತ ಪರಮ ಸುಖದ ಸಾಧನೆಯ ಹಾದಿ. ಇದು ಅಕ್ಕನ ಜೀವನದ ಗುರಿಯು ಆಗಿತ್ತು. ಸದಾ ದೈವವನ್ನು ನೆನೆಯುತ್ತಾ ಭಕ್ತಿಯ ಆತ್ಮಾನಂದದಲ್ಲಿ ಕಳೆದಳು. ಚೆನ್ನಮಲ್ಲಿಕಾರ್ಜುನನ ಒಲುಮೆಗಾಗಿ ಹಾತೊರೆಯುವ ಅಕ್ಕ ಬಹಿರ್ಮುಖವನ್ನು ಅಂತರಂಗವಾಗಿಸಿಕೊಂಡು ಅಂತರಂಗದಲ್ಲಿ ವಿಹರಿಸುತ್ತಾ, ಬಹಿರಂಗವನ್ನು ಇಲ್ಲವಾಗಿಸಿಕೊಳ್ಳುತ್ತಾ, ತನ್ನೊಳಗಿನ ಆಧ್ಯಾತ್ಮ ಶೋಧಿಸಿಕೊಳ್ಳುತ್ತಾ, ಆಧ್ಯಾತ್ಮಿಕ ಜೀವನದಲ್ಲಿನ ದೇವರ ಬಗ್ಗೆ ಇದ್ದ ಜಿಜ್ಞಾಸೆ, ಹಂಬಲ, ಭಕ್ತಿ ಇವುಗಳ ಮೂಲಕ ಅಂತರಂಗದ ಅನುಭವನ್ನು ಆತ್ಮವಿದ್ಯಾಯಾಗಿಸಿಕೊಂಡು ಶರಣತತ್ವದಲ್ಲಿ ನಡೆದ ಆಧ್ಯಾತ್ಮದ ಪಥವೇ ಅವಳ ಅಭಿವ್ಯಕ್ತಿ.

'ಅನುಭಾವವೆಂಬುದು ಆತ್ಮವಿದ್ಯೆ, ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು ತಾನಾರೆಂಬುದು ತೋರುವುದು; ಅನುಭಾವವೆಂಬುದು ನಿಜನಿವಾಸದಲ್ಲಿ ಇರಿಸುವುದು' ಎಂಬ ಶಿವಶರಣರ ಮಾತುಗಳಿಂದ ಅನುಭಾವ ಶಬ್ದದ ಅರ್ಥ ಕಲ್ಪನೆಯನ್ನು ತಿಳಿಸುತ್ತದೆ. ತಮ್ಮ ಅರಿವಿನಿಂದ ಮತ್ತು ಆಚರಣೆಯಿಂದ ಪಡೆದ ಅನುಭವವನ್ನು ಶಿವಶರಣರು ಅನುಭಾವವೆಂದು ಕರೆದಿದ್ದಾರೆ. "'ಅನುಭವ' ಲೌಕಿಕವಾದರೆ, 'ಅನುಭಾವ ಪಾರಮಾರ್ಥಿಕವಾದುದು. ಜೀವನಾನುಭ ಈ ಸಂಸಾರಕ್ಕೆ ಸಂಬಂಧಿಸಿದರೆ, 'ಶಿವಾನುಭವ' ಆಧ್ಯಾತ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ. ಲೋಕದ ಬದುಕನ್ನು ಅನುಭವಿಸುತ್ತಾ ಹೋದಂತೆಲ್ಲ, ಲೌಕಿಕದ ಅನುಭವ ಗಾಢವಾಗುತ್ತದೆ".[೧]

ಅನುಭಾವ ಎನ್ನುವುದು ಸ್ವತಃ ತಾನು ಅನುಭವಿಸುವಂತದಿದ್ದು ಬೇರೊಬ್ಬರಿಗೆ ತೋರಿಸುವಂತಹದಲ್ಲ. ಅನುಭವ ಬಹಿರಂಗದ ಬದುಕಿಗೆ ಸಂಬಂದಿಸಿದ್ದು. ಅನುಭಾವ ಅಂತರಂಗದ ಅನುಭವಕ್ಕೆ ವೇದ್ಯವಾಗುವ ಆತ್ಮವಿದ್ಯೆ. ಇದು ಅಕ್ಕನ ವಚನವೊಂದರ ಉಲ್ಲೇಖದಲ್ಲಿ ಇನ್ನೂ ಸಷ್ಟವಾಗಿದೆ,

"ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತು
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು
ಇಂತಿಪ್ಪ ಅನುಭಾವಿರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನ".

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ಪುಟ-೯೯, ವಚನ- ೩೭೦.)**

ಮರ-ಮರ ಮಂಥನದಿಂದ ಬೆಳಕು ಬಂದಂತೆ, ಆತ್ಮ-ಆತ್ಮಗಳ ಮಂಥನದಿಂದ ಅನುಭಾವವಾಗುತ್ತದೆ. ಇಂತಹ ಬೆಳಕೆ ಅಂತರಂಗವನ್ನು ಅವಲೋಕಿಸಿಕೊಳ್ಳುವ ವಿಧಾನವಾಗಿ ಮುಕ್ತಿಯ ಕಡೆಗೆ ಸಾಗುವ ಮಾರ್ಗ. ಕಾಮ, ಕ್ರೋಧ, ಮೋಹ, ಮದ, ಮತ್ಸರಗಳನ್ನು ಸುಟ್ಟು ಅಂತರಂಗದಲ್ಲಿ ಬೆಳಕು ಮೂಡುತ್ತದೆ. ಅನುಭಾವ ಆಧ್ಯಾತ್ಮಿಕಪಥದತ್ತ ನಡೆಸುವ ಆತ್ಮವಿದ್ಯೆ. ಆ ಅನುಭವದಿಂದಲೇ ತನ್ನನ್ನು ತಾನು ತಿಳಿದಿಕೊಂಡು ಸದಾಚಾರದಿಂದ ಸತ್‌ಪಥದಲ್ಲಿರುವುದೇ ಆಧ್ಯಾತ್ಮ. ಅಕ್ಕ ಭಗವಂತನಲ್ಲಿ ಅಲೌಕಿಕದ ಅನುಭಾವದ ಬೇಡಿಕೆ ಸಲ್ಲಿಸಿ ಎತ್ತರದ ವ್ಯಕ್ತಿತ್ವ ಬೆಳಸಿಕೊಳ್ಳಲು ಸಾಧ್ಯವಾಗಿದ್ದು. ಅಕ್ಕನ ಅನುಭಾವ ಚೆನ್ನಮಲ್ಲಿಕಾರ್ಜುನನ್ನು ಕುರಿತ ಕನಸು-ಹಂಬಲ ಹಾಗೂ ತಳಮಳ ರೂಪದ ಅನ್ವೇಷಣೆಯ ಸ್ಥಿತಿಯಾಗಿರುವುದರಿಂದ, ಮುಖ್ಯವಾಗಿ ಅದು ಗಾಢವಾದ ಅಂತರ್ಮುಖ ಪ್ರವೃತ್ತಿಯಾಗಿದೆ. ಮರ-ಮರ ಮಥಿಸಿ ಅನುಭಾವ ಹುಟ್ಟಿದಂತೆ ಲೋಕಾನುಭವ ಪಡೆದ ನಂತರದ ಪಯಣ.

> "ಬೆಟ್ಟಕ್ಕೆ ಸಾರವಿಲ್ಲೆಂಬರು;
> ತರುಗಳು ಹುಟ್ಟುವಪರಿ ಇನ್ನೆಂತಯ್ಯಾ?
> ಇದ್ದಲಿಗೆ ರಸವಿಲ್ಲೆಂಬರು;
> ಕಬ್ಬುನ ಕರಗುವ ಪರಿ ಇನ್ನೆಂತರಯ್ಯಾ?
> ಎನಗೆ ಕಾಯವಿಲ್ಲೆಂಬರು;
> ಚೆನ್ನಮಲ್ಲಿಕಾರ್ಜುನನೊಲಿವಪರಿ ಇನ್ನೆಂತಯ್ಯಾ?"

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ಪುಟ-೯೧, ವಚನ-೩೦೭..)**

ಅಕ್ಕ ಪ್ರಾಪಂಚಿಕ ಚಿಂತನೆಗಳಿಂದ ದೂರವಾಗಿದ್ದರೂ ಲೋಕದ ಅನುಭವದ ಮೂಲಕವೇ ಅನುಭಾವವನ್ನು ಪಡೆದದು. ಅಕ್ಕನ ಮೇಲಿನ ವಚನವೊಂದನ್ನು ಉಲ್ಲೇಖಿಸಿ ವಿಜಯ ಶ್ರೀ ಸರಬದ "ಅಕ್ಕಹಾದೇವಿಯಲ್ಲಿನ ಈ ಎರಡು ಪ್ರಶ್ನೆಗಳಲ್ಲಿ ನೇತ್ಯಾತ್ಮಕದಲ್ಲಿಯೇ ಇತ್ಯಾತ್ಮಕ ಅಡಗಿದೆ. ಸಾರವಿರುವುದು ಫಲವತ್ತಾದ ಮಣ್ಣಿನಲ್ಲಿ ಮಾತ್ರ ಎಂಬುದು ಲೋಕಾನುಭವ. ಹಾಗಾದರೆ ಸಾರವಿಲ್ಲದ ಬೆಟ್ಟದಲ್ಲಿ ಮರಗಳು ಹೇಗೆ ಹುಟ್ಟಿದವು? ಬಳ್ಳಿಗಳು ಹೇಗೆ ಬೆಳೆದವು? ರಸವಿಲ್ಲದ ಇದ್ದಲಿನಲ್ಲಿ ಕಬ್ಬಿಣ ಹೇಗೆ ಕರಗುತ್ತದೆ? ಅಕ್ಕನ ಈ ಪ್ರಶ್ನೆಗಳಲ್ಲಿ ಲೌಕಿಕದ ಮೂಲಕ ಚೆನ್ನಮಲ್ಲಿಕಾರ್ಜುನನ್ನೊಲಿಸಿಕೊಳ್ಳುವ ಪರಿ ಕಾಣಿಸುತ್ತದೆ. ನಾನೆಂಬುದಳಿದಾಗ ನನ್ನ ದೇಹ ಅಳಿಯುವುದಿಲ್ಲ, ಅಹಃ ಅಳಿಯುತ್ತದೆ. ಆಗ ಅದು 'ನಾನು' ಹೋಗಿ 'ನಾವು' ಆಗುತ್ತದೆ. 'ವ್ಯಷ್ಟಿ' ಹೋಗಿ ಸಮುಷ್ಠಿಯಾಗುತ್ತದೆ. ಹೀಗೆ ಜೀವದ ಮೂಲಕ ದೇವರನ್ನು ಕಾಣಲು, ನರನ ಮುಖಾಂತರ ಹರನನ್ನು ನೋಡಲು ಈ ಅನುಭಾವವೆಂಬುದು ಅಂತರಂಗದ ಸಾಧನವಾಗುತ್ತದೆ. ಲೌಕಿಕದೊಂದಿಗೆ ಅಲೌಕಿಕವನ್ನು ಬೆಸೆಯುವ ಸಮನ್ವಯದ ಕೊಂಡಿಯಾಗುತ್ತದೆ"[೨] ಎಂದಿದ್ದಾರೆ. ಲೋಕಾನುಭವದ ಅರಿವಿನೊಂದಿಗೆ ಅಕ್ಕ ಲೌಕಿಕ ವ್ಯವಹಾರಗಳೊಂದಿಗೆ ಅಂತರವಿಟ್ಟುಕೊಳ್ಳುತ್ತಾ ಅಂತರ್ಮುಖಿಯಾಗಿ ಸಾಗುತ್ತಾಳೆ.

> "ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ.
> ಆಕಾರವಿಡಿದು ಸಾಕಾರಸಹಿತ ನಡೆವೆ.
> ಹೊರಗೆ ಬಳಸಿ ಒಳಗೆ ಮರೆದಿಪ್ಪೆ.
> ಬೆಂದನುಲಿದಂತೆ ಹುರಿಗುಂದದಿಪ್ಪೆ.
> ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ,
> ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆ.

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ವಚನ-೩೬೨, ಪುಟ- ೧೦೭.)**

ಲೋಕಾನುಭವದ ಹಿನ್ನೆಲೆಯಲ್ಲಿ "ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡು ರೂಪ' ಎನ್ನುವ ಅಕ್ಕನ ವಚನಗಳ ಒಟ್ಟು ಅಭಿವ್ಯಕ್ತಿಯಲ್ಲಿ ವಸ್ತು ವಿಷಯಗಳನ್ನು 'ಆತ್ಮನಿರೀಕ್ಷಣೆ, ಶರಣಸತಿ ಲಿಂಗಪತಿ, ತೀವ್ರವಿರಕ್ತಿ, ಶಿವನ ಸಾಕಾರ ರೂಪವರ್ಣನೆ, ಷಟ್ಟಸ್ಥಲ ಸಿದ್ಧಾಂತ, ವಿರಕ್ತನ ಲಕ್ಷಣ, ವೈಯಕ್ತಿಕ ಸಂಗತಿಗಳು, ಅಲ್ಪಮಟ್ಟಿಗೆ ಸಮಾಜ ವಿಮರ್ಶೆ" ಎಂದು ವಿಂಗಡಿಸಲಾಗಿದೆ'. ಅಕ್ಕಮಹಾದೇವಿ ಸ್ವಭಾವತಃ ದೈವಭಕ್ತೆಯಾಗಿದ್ದಳು. ಇಷ್ಟದೈವವನ್ನು ಭಕ್ತಿಯಿಂದ ಒಲಿಸಿಕೊಳ್ಳುವ ಹಂಬಲ ಬಾಲ್ಯದಿಂದಲೇ ಬಂದಂತಹದ್ದು. ಲಿಂಗ ಭಕ್ತಿ, ಆತ್ಮ ಚಿಂತನೆಯಲ್ಲಿ ಮನಮಗ್ನಳಾದ ಅಕ್ಕನ ಆಧ್ಯಾತ್ಮದ ಆಸಕ್ತಿಗಳು ಅಂತಂಗದ ಅಭಿವ್ಯಕ್ತಿ. ನಿತ್ಯ ಕನಸಿನಲ್ಲಿ ಕಾಣುವ ಚೆನ್ನಮಲ್ಲಿಕಾರ್ಜುನನನ್ನು ಒಲಿಸುವ ಗಾಢವಾದ ಅಪೇಕ್ಷೆಯಾಗಿ ತನ್ನೊಳಗೆ ಅವನನ್ನೇ ಕನವರಿಸುವಳು. 'ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಳು ತೋರದ ಮುನ್ನ,'[೩] ಸ್ತ್ರೀತ್ವದ ಅರಿವು ಮೀರಿದ ಆಧ್ಯಾತ್ಮ ಅನಿಸಿಕೆಗಳು. ಯೌವನವು ಮೂಡುವ ಮೊದಲೇ ಚೆನ್ನಮಲ್ಲಿಕಾರ್ಜುನನಲ್ಲಿ ಸೇರಿಕೊಂಡ ಭಾವವನ್ನು ಆಕೆ ಈ ವಚನ ಸೂಚಿಸುತ್ತದೆ. 'ಹೆಂಗೂಸೆಂಬ' ಲೌಕಿಕ ಸಂಬಂಧವನ್ನು ಕಳಚಿಕೊಂಡ ಆಕೆಯ ಭಕ್ತಿಯ ಮಾರ್ಗ ಸ್ಪಷ್ಟವಾಗಿ ತೋರುತ್ತದೆ.

> "ಎನ್ನ ನಾನರಿವ ಮುನ್ನವೆಲ್ಲಿರ್ದೆ ಹೇಳಯ್ಯ?
> ಚಿನ್ನದೊಳಗಣ ಬಣ್ಣದಂತೆ ಎನ್ನೊಳಿರ್ದೆಯಯ್ಯ!
> ಎನ್ನೊಳಗಿರ್ದು ಮೈದೋರದ ಭೇದವ ನಿಮ್ಮಲ್ಲಿ ಕಂಡೆ....."

**(ಡಾ. ಸಾ. ಶಿ. ಮರುಳಯ್ಯ(ಸಂ), ಅಕ್ಕನ ವಚನಗಳು, ವಚನ-೨, ಪುಟ-೩.)**

ಭಕ್ತಿ-ವಿರಕ್ತಿ, ಶಕ್ತಿ, ನಿಶ್ಚಲ ನಿಷ್ಠೆ, ಕಠೋರ ಹಾದಿಯಲ್ಲಿ ಸಾಗುವ ಅಕ್ಕ ತನ್ನ ಸುತ್ತಲ ಜಗತ್ತಿನ ಸಂಬಂಧಗಳ ಅಂತರ ದೂರಮಾಡಿಕೊಳ್ಳುವತ್ತ ಸಾಗುತ್ತಾಳೆ. ಈ ಭಕ್ತಿ-ವಿರಕ್ತಿಯ ಆಯ್ಕೆಯ ಹಾದಿಯು ಎಲ್ಲ ನಶ್ವರತೆಯನ್ನೂ ಮೀರಿದ ಎಲ್ಲ ಸಾವನ್ನೂ ಗೆದ್ದ, ಎಲ್ಲ ಸತ್ಯವನ್ನೂ ಶಾಶ್ವತವಾಗಿ ಪಡೆಯುವ ಮರಣರಹಿತ ಪರಮ ಸುಖದ ಸಾಧನೆಯ ಹಾದಿ. ಇದು ಅಕ್ಕನ ಜೀವನದ ಗುರಿಯು ಆಗಿತ್ತು. ಸದಾ ದೈವವನ್ನು ನೆನೆಯುತ್ತಾ ಭಕ್ತಿಯ ಆತ್ಮಾನಂದದಲ್ಲಿ ಕಳೆದಳು. ಚೆನ್ನಮಲ್ಲಿಕಾರ್ಜುನನ ಒಲುಮೆಗಾಗಿ ಹಾತೊರೆಯುವ ಅಕ್ಕ ಬಹಿರ್ಮುಖವನ್ನು ಅಂತರಂಗವಾಗಿಸಿಕೊಂಡು ಅಂತರಂಗದಲ್ಲಿ ವಿಹರಿಸುತ್ತಾ, ಬಹಿರಂಗವನ್ನು ಇಲ್ಲವಾಗಿಸಿಕೊಳ್ಳುತ್ತಾ, ತನ್ನೊಳಗಿನ ಆಧ್ಯಾತ್ಮ ಶೋಧಿಸಿಕೊಳ್ಳುತ್ತಾ, ಆಧ್ಯಾತ್ಮಿಕ ಜೀವನದಲ್ಲಿನ ದೇವರ ಬಗ್ಗೆ ಇದ್ದ ಜಿಜ್ಞಾಸೆ, ಹಂಬಲ, ಭಕ್ತಿ ಇವುಗಳ ಮೂಲಕ ಅಂತರಂಗದ ಅನುಭವನ್ನು ಆತ್ಮವಿದ್ಯಾಯಾಗಿಸಿಕೊಂಡು ಶರಣತತ್ವದಲ್ಲಿ ನಡೆದ

ಆಧ್ಯಾತ್ಮದ ಪಥವೇ ಅವಳ ಅಭಿವ್ಯಕ್ತಿ.

"ಅಯ್ಯಾ, ಸರ್ವಮೂಲಹಂಕಾವಿಡಿದು,
ಕುಲಭ್ರಮೆ ಛಲಭ್ರಮೆ ಜಾತಿಭ್ರಮೆ,
ನಾಮ ಭ್ರಮೆ ಆಶ್ರಯ ಮತ ಶಾಸ್ತ್ರ ಭ್ರಮೆ,
ತರ್ಕ ಭ್ರಮೆ, ರಾಜ್ಯ ಭ್ರಮೆ, ಧನ ಧಾನ್ಯ ಪುತ್ರ ಮಿತ್ರ ಭ್ರಮೆ,
ಐಶ್ವರ್ಯ ತ್ಯಾಗ ಭೋಗ ಯೋಗಭ್ರಮೆ,
ಕಾಯ ಕರಣ ವಿಷಯ ಭ್ರಮೆ,
ವಾಯು ಮನ ಭಾವ ಜೀವ ಮೋಹ ಭ್ರಮೆ,
ನಾಹಂ ಕೋಹಂ ಸೋಹಂ ಮಾಯಾಭ್ರಮೆ ಮೊದಲಾದ
ಬತ್ತೀಸ ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು
ಶಿವಭಕ್ತಿ ಶಿವಶಕ್ತಿ ಶಿವಪ್ರಸಾದಿ ಶಿವಶರಣ ಶಿವೈಕ್ಯ
ಶವಜಂಗಮವೆಂದು ನುಡಿಯಾಲಾರದೆ ಎನ್ನ ಮನ ನಾಚಿ
ನಿಮ್ಮಡಿಗಭಿಮುಖವಾಯಿತ್ತಯ್ಯಾ ಚೆನ್ನಮಲ್ಲಿಕಾರ್ಜುನ."

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ವಚನ-೩೮, ಪುಟ-೧೬.)**

ಅಕ್ಕ ತಾನು ಬಯಸಿದ ಶಿವನ ಸಾಕ್ಷಾರಕ್ಕಾಗಿ ನಡೆಸಿದ ಸಂಘರ್ಷದಲ್ಲಿ ಅಭಿವ್ಯಕ್ತಿಯ ಕ್ರಮವಿದೆ. ಆಕೆಯ ವ್ಯಕ್ತಿತ್ವ ಪ್ರಕೃತಿ ಸಹಜ ಗುಣಗಳನ್ನು ಕಳೆದಿಕೊಳ್ಳುತ್ತಾ ಚೆನ್ನಮಲ್ಲಿಕಾರ್ಜುನನ ಧ್ಯಾನ ಮತ್ತು ಚಿಂತನೆಗಳಿಂದ ವಿಶಿಷ್ಟ ವೈರಾಗ್ಯ ಮತ್ತು ಭಕ್ತಿಯಗಳಿಂದ ರೂಪಗೊಳ್ಳುತ್ತಾ ಸಾಗಿದೆ. ಚೆನ್ನಮಲ್ಲಿಕಾರ್ಜುನನ ಮೇಲಿನ ಆಕೆಗಿದ್ದ ಆಸಕ್ತಿ ಕುತೂಹಲಗಳು ನಂತರದಲ್ಲಿ ಹಂಬಲ ಮತ್ತು ಭಕ್ತಿಯಾಗಿ ಬದಲಾಗುತ್ತದೆ. 'ಅರಿವು ಕಣ್ಣೆರೆಯದವರಲ್ಲಿ ಆರತಿಯನೊಲ್ಲನಯ್ಯ' ಅಕ್ಕನ ಮಾತು ಅರಿವು ಮತ್ತು ಆಚರಣೆಯಲ್ಲಿ ಸಮನ್ವಯತೆ ಸಾಧಿಕೊಳ್ಳುವ ಅರಿವಿನ ಸಾರ್ಥಕತೆಯನ್ನು ನುಡಿದಂತೆ ನಡೆದ ಜ್ಞಾನದ ಸದ್ರುಶ್ಯವಾಗಿದೆ. 'ಅರಿವಿನ ಅನುಭಾವವೇ ಆಶ್ರಯ' ಎಂಬ ಬಸವಣ್ಣನ ನುಡಿಯಂತೆ ಅರಿವಿನ ಸಾಕ್ಷಾಕ್ಕಾರವಾದ ಮೇಲೆಯೇ ಪರಿಪೂರ್ಣ ಆಧ್ಯಾತ್ಮದ ಪಥ ಕಾಣುವುದು. 'ಅರಿವೇ ಗುರು' ಅರಿವಿನಿಂದಲೇ ಆರಾಧ್ಯದೈವನ್ನು ಕಾಣಲು ಸಾಧ್ಯ. ಲೋಕದಲ್ಲಿ ಕಾಣುವ ಭ್ರಮೆಗಳಿಂದ ಹೊರಬಂದು ಮುಕ್ತಿಯ ಪ'ರಂಜ್ಯೋತಿ ಕಾಣುವಂತಾಗುವುದು. ಈ ದೇಹ ಅರಿವಿನ ನೆಲೆ. ಅರಿವು ಎಂದರೆ ಅನುಭಾವ. ಅರಿವಿನಿಂದ ಕಟ್ಟುಪಾಡುಗಳ ಪೂರ್ವಗ್ರಹದ ಹೊರೆಯಿಂದ ಕಳಚಿಕೊಳ್ಳಲು ಅನುವಾಗುತ್ತದೆ. ಲೌಕಿಕ ಗುರಿವಿನ ಮೂಲಕ ಅರಿವಿನ ಸಾಕ್ಷಾಕ್ಕಾರ. ಅರಿವಿನ ಮೂಲಕ ಅಷ್ಟಾವರಣ. ಅರಿವಿನ ಸಾಕ್ಷಾಕ್ಕಾರದಿಂದ ಇಷ್ಟಲಿಂಗದ ಸಾಕ್ಷಾಕ್ಕಾರ. ಅರಿವಿನ ಭಕ್ತಿಯು ಜ್ಞಾನದ ಪಥದಲ್ಲಿ ಸಾಗಿ, ಜ್ಞಾನ ಭಕ್ತಿಯ ನೆರಳಲ್ಲಿ ಇರಗೊಂಡು ಅನುಸರಿಸುವ ಅಕ್ಕನ ಮನೋಗತದ ಅನುಭಾವನ್ನು ಈ ವಚನ ಹೀಗೆ ಹೇಳದ್ದಾಳೆ,

"ಜ್ಞಾನದ ಕಾರಣಾಂಗವೇ ಭಕ್ತಿಯು,
ಭಕ್ತಿಯ ಮಹಾಕಾರಣಾಂಗವೆ ಜ್ಞಾನವು,
ಭಕ್ತಿ ಜ್ಞಾನವೆಂಬುದು ಕಾಕಾಕ್ಷಿಯಂತೆ
ಭಕ್ತಿ ಜ್ಞಾನವೆಂಬುದು ಎನ್ನ ಮೋಹದ
ಚೆನ್ನಮಲ್ಲಿಕಾರ್ಜುನಾ ನಿಮ್ಮಂತೆ".

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ಅದೇ, ವಚನ-೨೧೭, ಪುಟ-೩೫.)**

"ಭಾನುವಿನಂತಿಪ್ಪು ಜ್ಞಾನ,
ಭಾನಕಿರಣದಂತಿಪ್ಪುದು ಭಕ್ತಿ,
ಭಾನುವನುಳಿದು ಕಿರಣಂಗಳಿಲ್ಲ,
ಕಿರಣಂಗಳನುಳಿದು ಭಾನುವಿಲ್ಲ,
ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು
ಚೆನ್ನಮಲ್ಲಿಕಾರ್ಜುನಾ."

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ಅದೇ, ವಚನ-೩೧೬, ಪುಟ-೬೫.)**

ಭಾನು-ಕಿರಣದಂತೆ, ಜ್ಞಾನ-ಭಕ್ತಿ ಪರಸ್ಪರ ಆಶ್ರಯಿಸಿ ಭಕ್ತಿಯ ನೆಲೆಗೊಳ್ಳಲು ಜ್ಞಾನದ ಅರಿವಿನ ನಿಲುವು ಪರಿಪೂರ್ಣ ಸಾಕ್ಷಾ್ಕರವೆನಿಸುತ್ತದೆ. ಹೀಗೆ, ಪರಮಾರ್ಥವನ್ನು ಬಯಸಿದ ಆಧ್ಯಾತ್ಮಿಕದತ್ತ ಸಾಗಿದ ಪಥದ ಪಯಣದಲ್ಲಿ ಅಕ್ಕ ಎದುರಿಸಿದ ಕಠಿಣ ಸವಾಲುಗಳು ಆಕೆಯ ಅಭಿವ್ಯಕ್ತಿಯಲ್ಲಿ ಮೂಡಿವೆ. ಆಕೆಯ ಬದುಕಿನ ತಲ್ಲಣಗಳು, ಹೋರಾಟಗಳು, ಲೌಕಿಕವಾದರೆ, ಚೆನ್ನಮಲ್ಲಿಕಾರ್ಜುನನ್ನು ಕೂಡುವ ಹಂಬಲ-ತುಡಿತ ಅಕ್ಕನ ಅಭಿವ್ಯಕ್ತಿಯ ಅಲೌಕಿಕ ಅನನ್ಯತೆಗಳು. "ಅನುಭಾವವನ್ನು ಬಯಸಿ, ಎಲ್ಲದಕ್ಕೂ ಅತೀತವಾದ ಚೆನ್ನಮಲ್ಲಿಕಾರ್ಜುನನೆ ತನ್ನ ಗಂಡನೆಂದು ನಿಶ್ಚಯಿಸಿ ಅವನೊಡಗಿನ ಸಮಾಗಮವೇ, ಪರಮ ಗುರಿಯೆಂದು, ಅದನ್ನು ಪಡೆಯಲು ನಡೆಸಿದ ಹೋರಾಟವೇ ಅಕ್ಕಮಹಾದೇವಿಯ ಅಂತರಂಗದ ಚರಿತ್ರೆಯಾಗಿದೆ. ಅದಕ್ಕಾಗಿ ಆಕೆ ಹೊರಗಿನ ಪರಿಸರವನ್ನು ಎಷ್ಟು ರೀತಿಯಲ್ಲಿ ಎದುರಿಸಿಬೇಕಾಗಿ ಬಂತು ಎನ್ನುವುದು ಅವಳ ಬಾಹ್ಯ ಚರಿತ್ರೆಯಾಗಿದೆ".[೪] ಲೌಕಿಕ ಗಂಡನ ನೀರಾಕರಿಸಿ, ತನ್ನ ಆರಾಧ್ಯ ದೈವನಲ್ಲಿ ಸ್ಥಾಯಿಗೊಳ್ಳುವ ಅಕ್ಕನ ಭಾವನೆಯಲ್ಲಿ,

"ಸಂಸಾರ ಸಂಗದಲ್ಲಿರ್ದೆ ನೋಡಾ ನಾನು
ಸಂಸಾರ ನಿಸ್ಸಾರವೆಂದು ತೋರಿದನೆನಗೆ ಶ್ರೀಗುರು
ಅಂಗವಿಕಾರದ ಸಂಗವ ನಿಲಿಸಿ

ಅಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು
ಹಿಂದಣ ಜನ್ಮವ ತೊಡೆದು
ಮುಂದಣ ಪಥವ ತೋರಿದನೆನ್ನ ತಂದೆ
ಚೆನ್ನಮಲ್ಲಿಕಾರ್ಜುನನ ನಿಜವ ತೋರಿದೆನ್ನ ಗುರು."

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ವಚನ-೩೮೫, ಪುಟ-೧೧೭.)**

ಸಂಸಾರ ನಿಸ್ಸಾರವೆಂದು ಭೌತಿಕ ಅಂಗವಿಕಾರದ ಸಂಗವನ್ನು ತೊರೆದು, ಆ ಅಂಗದ ಮೇಲೆ ಲಿಂಗವನ್ನು ನೆಲೆ ನಿಲ್ಲಿಸಿಕೊಂಡು ಕಾಯವನ್ನು ದೈವನೆಲೆಯಾಗಿಸಿ ಆಧ್ಯಾತ್ಮದ ಮಾರ್ಗವನ್ನು ಆರಿಸಿಕೊಂಡು ಭೌತಿಕ ಗಂಡನನ್ನು ಧಿಕ್ಕಸಿ, ಅಲೌಕಿಕ ಪತಿಯಲ್ಲಿ ಅರ್ಪಿಸಿಕೊಂಡು ಆಧ್ಯಾತ್ಮಿಕ ಅನುಭಾವದ ಸಾಕ್ಷಾತ್ಕಾರ ಪಡೆದಳು. ಸಂಸಾರವೆಂಬ ಕ್ಷಣಿಕ ಸುಖವನ್ನು ಧಿಕ್ಕರಿಸುವ ಅಕ್ಕನ ವೈಯಕ್ತಿಕ ಅನುಭವವು ಲೋಕಾನುಭವದ ಸ್ವರೂಪ ಪಡೆದುಕೊಂಡ ಆಧ್ಯಾತ್ಮದ ಉತ್ಕಟ, ಆಧ್ಯಾತ್ಮಿಕ ಹಂಬಲ ಸೂಚಿಸುತ್ತವೆ.

"ವನವೆಲ್ಲಾ ನೀನೆ, ವನದೊಳಗಣ ದೇವತರುಗಳೆಲ್ಲ ನೀನೆ,
ತರುವಿನೊಳಗಾಡುವ ಖಗಮೃಗವೆಲ್ಲ ನೀನೆ.
ಚೆನ್ನಲ್ಲಿಕಾರ್ಜುನಾ,
ಸರ್ವಭರಿತನಾಗಿ ಎನಗೇಕೆ ಮುಖದೋರೆ?"

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫,ವಚನ-೩೬೫, ಪುಟ-೧೦೮.**

ಲೌಕಿಕ ಅನುಭವದ ವಿರಕ್ತಿಯ ಅನುಭಾವದಲ್ಲಿ ಚೆನ್ನಲ್ಲಿಕಾರ್ಜುನನ್ನು ಪರಿಭಾವಿಸಿಕೊಳ್ಳುವ ಅಕ್ಕನ ಭಾವೋದ್ವೇಗ, ತಲ್ಲಣಗಳು, ನಿರೀಕ್ಷೆಗಳು, ಸರ್ವಾಂತರಗಾಮಿಯಾದ, ಅವನಿಗಾಗಿ ನೆಡೆಸುವ ಹುಡುಕಾಟ ಅಕೆಯ ಅಭಿಕ್ತಿಯಲ್ಲಿ ಚಿತ್ರಿತವಾಗಿವೆ. ಅಕ್ಕನ ಆಧ್ಯಾತ್ಮಿಕ ಸಾಧನೆ ಮನವು ಸಂಪೂರ್ಣ ಅಂತರ್ಮುಖಿಯಾಗಿ ವ್ಯವಹರಿಸುತ್ತಾ ತನ್ನೊಳಗೆ ಲಿಂಗಾಂಗ ಸಾಮರಸ್ಯ ಶುದ್ಧವಾಗಿಸಿ ಪಂಚೇಂದ್ರಿಯಗಳನ್ನು ಲಿಂಗದಲ್ಲಿ ಬೆಸೆವ ಅಕ್ಕನ ವಿಭಿನ್ನ ಭಕ್ತಿಯ ಮುಖಗಳು, ಎಲ್ಲವನ್ನು ಆರಾಧ್ಯದೈವಕ್ಕೆ ಅರ್ಪಿಸುವ ಮನಸ್ಥಿತಿ,

"ನಚ್ಚುಗೆಯ ಮನ ನಿಮ್ಮಲ್ಲಿ, ಮೆಚ್ಚುಗೆಯ ಮನ ನಿಮ್ಮಲ್ಲಿ,
ಸಕುಗುಗೆ ಮನ ನಿಮ್ಮಲ್ಲಿ, ಸೋಲಿಗೆ ಮನ ನಿಮ್ಮಲ್ಲಿ,
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ,
ಕರಗುವ ಮನ ನಿಮ್ಮಲ್ಲಿ, ಕೊರಗುವ ಮನ ನಿಮ್ಮಲ್ಲಿ,
ಎನ್ನ ಪಂಚೇಂದ್ರಿಯಂಗಳು ಕಬ್ಬನ ಉಂಡ ನೀರಿನಂತೆ
ನಿಮ್ಮಲ್ಲಿ ಬೆಸುಗೆ ಚೆನ್ನಲ್ಲಿಕಾರ್ಜುನಯ್ಯಾ".

**(ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ-೫, ವಚನ-೨೪೭, ಪುಟ-೭೩.)**

ಲಿಂಗದಲ್ಲಿ ಅಂಗವನ್ನು ಮರೆತು ಲಿಂಗದಲ್ಲಿ ಲಿಂಗೈಕ್ಯವಾಗುವ ಭಾವ ಇಲ್ಲಿ ಅಭಿವ್ಯಕ್ತವಾಗಿದೆ. "ಅಕ್ಕನ ಅನುಭಾವವು ಅಧ್ಯಾತ್ಮದ ನೆಲೆಯಲ್ಲಿ, ವೈರಾಗ್ಯದ ಭಾವದಲ್ಲಿ ಅರಳಿದೆ. ಚೆನ್ನ ಮಲ್ಲಿಕಾರ್ಜುನನನ್ನೇ ತನ್ನ ಪತಿಯೆಂದು ಪ್ರೀತಿಸುವ, ಆರಾಧಿಸುವ ಅಕ್ಕನ ಮಧುರಭಾವದ ಭಕ್ತಿಯ ಅನುಭವವು ಶಿವಾನುಭವವಾಗಿದೆ".[೮] 'ಶಕ್ತಿ ವಿಶಿಷ್ಟಾದ್ವೈತ' ಶರಣರು ನಿರೂಪಿದ ಆಧ್ಯಾತ್ಮಿಕ ಸಿದ್ಧಾಂತ. ಶಿವ ಮತ್ತು ಜೀವ ಇವರಿಬ್ಬರಲ್ಲೂ ಶಕ್ತಿಯಿರುತ್ತದೆ. ಶಿವನ ಈ ಶಕ್ತಿಗಳು ಸೃಷ್ಟಿಯ ವಿಕಾಸದ ಹಂತಗಳಾಗಿ ಇಚ್ಚಾಶಕ್ತಿ, ಜ್ಞಾನಶಕ್ತಿ, ಹಾಗೂ ಕ್ರಿಯಾಶಕ್ತಿಗಳಾಗಿರುವದರಿಂದ ಪರಿಪೂರ್ಣವಾಗಿರುತ್ತದೆ. ಜೀವನಲ್ಲಿಯೂ ಈ ಶಕ್ತಿಗಳಿದ್ದು ಅವು ಸಂಕುಚಗೊಂಡ ಕಾರಣ ಅವು ಅಲ್ಪತ್ವದ ಶಕ್ತಿಗಳಾದ ಅಣುವಮಲ, ಮಯಾಮಲ ಹಾಗೂ ಕಾರ್ಮಿಕಮಲ ಹೀಗೆ ಮಲತ್ರಯಗಳು ಜೀವಕ್ಕೆ ಶಕ್ತಿರೂಪದಲ್ಲಿ ಆವೃತವಾಗಿರುತ್ತದೆ. ಶಿವನ ಶಕ್ತಿಯನ್ನು 'ಸೂಕ್ಷ್ಮ ಚಿದಚಿದಾತ್ಮಕ ಶಕ್ತಿ' ಎಂದು ಜೀವದ ಶಕ್ತಿಯನ್ನು 'ಸ್ಥೂಲ ಚಿದಾತ್ಮಕ ಶಕ್ತಿ' ಎಂದು ಈ ಶಕ್ತಿಭಿನ್ನತೆಯನ್ನು ಜೀವವು ಶಕ್ತಿ ವಿಕಾಸಗೊಳಿಸಿಕೊಂಡು ಶಿವನೊಡನೆ ಅದ್ವೈತತ್ವ ಪಡೆದುಕೊಳ್ಳುವ ಸಾಧನೆಯ ಮಾರ್ಗವೇ 'ಶಕ್ತಿ ವಿಶಿಷ್ಟಾದ್ವೈತ' ತತ್ವದ ತಿರುಳು. ಈ ಸಾಧನೆಯ ಮಾರ್ಗವು ಜೀವವು ತನ್ನ ವಿಕಾಸ ಸಾಧನೆಗೆ ಬೇಕಾದ ಶ್ರದ್ಧೆ ಶುದ್ಧತೆ ಮತ್ತು ಏಕಾಗ್ರತೆಯನ್ನು ಪಡೆದು ಲೌಕಿಕದಿಂದ ಮುಕ್ತವಾಗಲು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಎಂಬ ಎಂಟು 'ಅಷ್ಟಾವರಣಗಳು' ಮತ್ತು ಜೀವ ವಿಕಾಸವಾದಂತೆ ಶಿವನೇ ತಾನಾಗುವ ಭಕ್ತಿ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಹಾಗೂ ಐಕ್ಯಸ್ಥಲಗಳು ಅನುಸರಿಸಬೇಕಾಗುತ್ತದೆ.

ಅಂತರಂಗ ಬಹಿರಂಗಗಳೆರಡು ಲಿಂಗತ್ವವಾಗಿ ಲಿಂಗವೇ ತಾನಾಗಿ ಪರಿಪೂರ್ಣಗೊಳ್ಳುವ, ಲಿಂಗವು ತನ್ನಲ್ಲಿಯೇ ಉಳಿದು ಅಲ್ಲಿ ಐಕ್ಯವಾಗುವ ಅಧ್ಯಾತ್ಮದ ಸಂಕಲ್ಪ ಕೊನೆಮುಟ್ಟುವುದು. ಇದು ಅಕ್ಕ ಸಾಧಿಸಿಕೊಂಡ ಆಧ್ಯಾತ್ಮಿಕ' ಸಾಧನೆ. ಅಧ್ಯಾತ್ಮಿಕ ಅನುಭಾವಿಯಾಗಿ ವಿರಕ್ತಿ ನೆಲೆಯಲ್ಲಿ ಏರಿದ ಎತ್ತರ ಇಲ್ಲಿ ತಿಳಿಯುತ್ತದೆ. ಸಾಧಕನು ತನ್ನತನ'ವನ್ನು ನಾಶಪಡಿಸಿಕೊಂಡು ದೇಹೇಂದ್ರಿಯಕರಣಾದಿಗಳ ಅಂತಃಕರಣವನ್ನು ಕೊನೆಯಲ್ಲಿ ಆತ್ಮವನ್ನೂ ಲಿಂಗ(ಶಿವ)ದಲ್ಲಿ ಐಕ್ಯವಾಗಿಸುತ್ತಾನೆ. ಇಂದ್ರಿಯಗಳ ಮೂಲಕ ಶಿವನಿಗೆ ಅರ್ಪಿಸುವಾಗ ಸಾಧಕನು ದೇಹದ ಇಂದ್ರಿಯ ಸುಖವನ್ನು 'ಲಿಂಗಪತಿ'ಗೆ ಅರ್ಪಿಸಿ ಮನಪ್ರಾಣಾದಿಗಳನ್ನು 'ಲಿಂಗಸತಿ'ಯಾಗಿಸಿಕೊಂಡು ರತಿಸುಖವನ್ನು ಅನುಭವಿಸುತ್ತಾನೆ. ಅಕ್ಕಮಹಾದೇವಿಯ ಆಧ್ಯಾತ್ಮಿಕ ಹಂಬಲ, ಮೋಕ್ಷಸಾಧನೆಯ ಈ ಸತಿ-ಪತಿ ಭಾವವನ್ನು ಆರೋಪಿಸಿಕೊಂಡ ವಚನಗಳಲ್ಲಿ ಚೆನ್ನಲ್ಲಿಕಾರ್ಜುನನನ್ನು ವರನಾಗಿ, ತಾನು ವಧುವಾಗಿ, ಅವನೊಂದಿಗಿನ ಹಲವು ನಿರೀಕ್ಷೆಗಳು, ಪ್ರಿಯನನ್ನು ಕಾಣದಾದಾಗ ಪ್ರೇಯಸಿಯ ಕಳವಳ, ಆತನನ್ನು ಕಂಡಾಗ ಸಂಭ್ರಮ, ಅತನೊಂದಿಗೆ ಮದುವೆಯ ಸಂಭ್ರಮ, ಅವನಲ್ಲಿನ ಕಾಣುವ ಸಂತೃಪಿ, ಅವನನ್ನು ಕಾಣುವ ಹಂಬಲ, ಅವನನ್ನು ಕಾಣುವ ಕನಸು, ಸಿಗುವನೋ ಇಲ್ಲವೆಂಬ ಭಯ, ಆತಂಕ, ಸಂಕಟ, ತಳಮಳ, ನೋವು, ನಲಿವು ಎಲ್ಲವೂ ಅಕ್ಕನ ವಚನಗಳಲ್ಲಿ ವ್ಯಕ್ತವಾಗಿ ಅನುಭಾದ ನೆಲೆಯಲ್ಲಿ ಮೂಡಿವೆ. ಅಕ್ಕನ ವಚನಗಳು ಷಟ್‌ಸ್ಥಲಗಳ ಸಾಂಪ್ರದಾಯಿಕ ಸಿದ್ಧಾಂತವಾಗಿ, ತನ್ನ ಅಲೌಕಿಕ ಸಾಧನೆಯ ಮೇರು ಕೃತಿಯ ರಚನೆಗಳಾಗಿ ನಿರ್ವಚನಗೊಂಡಿವೆ.

## ಆಧಾರ ಗ್ರಂಥಗಳು


೧. ವಿಜಯ ಶ್ರೀ ಸರಬದ, ಅಕ್ಕಮಹಾದೇವಿ, ಪುಟ–೫೮.

೨. ಡಾ. ವೀರಣ್ಣ ರಾಜೂರ(ಸಂ), ಶಿವಶರಣೆಯರ ವಚನ ಸಂಪುಟ, ಪುಟ–೭೫.

೩. ಹೆಚ್. ಎಂ. ಚೆನ್ನಯ್ಯ, ಜಿಜ್ಞಾಸೆ, ಸುರುಚಿ ಪ್ರಕಾಶನ, ಮೈಸೂರು–೧೯೭೪, ಪುಟ–೩೩.

೪. ವಿಜಯ ಶ್ರೀ ಸರಬದ, ಅಕ್ಕಮಹಾದೇವಿ, ಪುಟ–೬೨.

೫. ಡಾ. ಸಾ. ಶಿ. ಮರುಳಯ್ಯ(ಸಂ), ಅಕ್ಕನ ವಚನಗಳು